<u>ದಿನಾಂಕ: 18-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ:-</u>

ನಾನು ಈ ದಿನ ಒಟ್ಟು 14 ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-12 ಎಂದು, ಒಟ್ಟು 7 ಔಷಧಿ ಸೂಚಿ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-13 ಎಂದು, ಒಟ್ಟು 2 ಎಕ್ಸರೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯಿತು. ನನ್ನ ಆಧಾರ್ ಕಾರ್ಡ್ ಹಾಗೂ ಚಾಲನಾ ಪತ್ರದ Notarized ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. (ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನೋಟರೈಸ್ಡ್ ಪ್ರತಿಗಳೊಂದಿಗೆ ತಾಳೆ ನೋಡಿ ಸರಿ ಇದೆ ಎಂದು ಒಪ್ಪಿಕೊಂಡು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ವಾಪಾಸ್ ಮಾಡಲಾಯಿತು). ಸದರಿ ದಾಖಲೆಗಳನ್ನು ನಿಪಿ-15 ಮತ್ತು ನಿಪಿ-16 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

<u>ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:-</u>

(ಎದುರುದಾರರ ಪರ ವಕೀಲರನ್ನು ಕರೆಸಲಾಗಿ ಗೈರು ಹಾಜರಿರುತ್ತಾರೆ. ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಗಿದೆ).

<u>ಮರು ವಿಚಾರಣೆ: ಇಲ್ಲಾ.</u>

ಎಂ.ವಿ.ಸಿ. ಸಂಖ್ಯೆಃ 109/2024
ಪಿ. ಡಬ್ಲ್ಯೂಃ 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಚಿಕ್ಕಮಗಳೂರು.

ಎಸ್ಆರ್ಃ